ಅಂತೀಯಾ... ಅದೊಂಥರ ಹಗಲುಗನಸು ಬಿಡು,’ ಅಂತ ನಗುವಿನೊಂದಿಗೆ ಅನ್ನುತ್ತಿದ್ದ. ‘ನಾನು ನಿನ್ನ ಅಪ್ಪನಿಗೆ ತಿಂಗಳಿಗೆ ಎಪ್ಪತ್ತೈದು ರೂಬಲ್ಸ್ ಕೊಡ್ತೀನಿ. ಅವನಿಗೋ ನೀನಲ್ಲದೆ ಐದು ಜನ ಮಕ್ಕಳು. ಅವರೆಲ್ಲರೂ ನಿನಗಿಂತ ಚಿಕ್ಕವರು ಬೇರೆ. ಅಷ್ಟರಲ್ಲೇ ಅವನು ಆ ಐದು ಮಂದಿಯನ್ನೂ ನಿಭಾಯಿಸಬೇಕು. ಇದಕ್ಕೆ ನೀನೂ ಅವನಿಗೆ ಕೈ ಜೋಡಿಸಬೇಕು. ಹಾಗಾಗಿ, ನೀನು ನಿನ್ನ ಬದುಕಿಡೀ ಬಡತನದಲ್ಲೇ ಬೇಯಬೇಕು. ಅದಕ್ಕೋಸ್ಕರಾನೇ ನಾನು ಯಾವಾಗಲೂ ಹೇಳ್ತೀರ್ತೀನಿ–ಹಗಲುಗನಸು ಕಾಣೋದರಲ್ಲಿ ತಪ್ಪೇನಿದೆ ಅಂತ. ಅದು ನಿನ್ನನ್ನ ಖುಷಿಯಲ್ಲಿಡುತ್ತೆ, ಶಕ್ತಿ ಕೊಡುತ್ತೆ, ಜೊತೆಗೆ ಆಸೆಗಳನ್ನೂ ಚಿಗುರಿಸುತ್ತೆ. ಸಾಲದ್ದಕ್ಕೆ ಕೆಲವೊಮ್ಮೆ, ಆ ಕನಸು ಇದ್ದಕ್ಕಿದ್ದಂತೆ ನಿಜವಾಗಿಯೂ ಬಿಡುತ್ತೆ, ಹೌದೋ ಅಲ್ವೋ? ಅದು ತುಂಬಾ, ತುಂಬಾನೇ ಅಪರೂಪ, ಆದರೂ ಆಗುತ್ತೆ ಅನ್ನೋದು ಮಾತ್ರ ನಿಜ...’

ಇಂಥ ಕುಚೋದ್ಯದ ಮಾತುಗಳನ್ನೆಲ್ಲಾ ತುಂಬಾ ಕರುಣಾಭಾವದಿಂದ ಆಲಿಸುತ್ತಿರುವವಳಂತೆ ಅವಳು ತಾನೇ ಕಷ್ಟಪಟ್ಟು ಅವನತ್ತ ನೋಡಿ ನಗುವ ನಾಟಕವಾಡುತ್ತಿದ್ದಳು. ಆ ಯಾವೊಂದೂ ಮಾತುಗಳನ್ನೂ ಕೇಳಿಸಿಕೊಳ್ಳದವನಂತೆ ನಾನೂ ನಟನೆ ಮಾಡುತ್ತಿದ್ದೆ. ಅಪ್ಪ ಮಾತ್ರ ಅದೊಂದು ದಿನ ಮತ್ತೂ ಮುಂದುವರೆದು ನನ್ನತ್ತ ಬೆರಳು ಮಾಡಿ ಹೇಳಿದ: ‘ಇವನಿದಾನಲ್ಲ ಈ ಹುಡುಗ ಇವನಿಗೂ ತನ್ನದೇ ಆದ ಕನಸುಗಳಿರಬಹುದು. ತನ್ನ ಅಪ್ಪ ಒಂದು ದಿನ ಸಾಯ್ತಾನೆ, ಆಗ ಎಣಿಸಲಾರದಷ್ಟು ಚಿನ್ನ ತನ್ನದಾಗಿಬಿಡುತ್ತೆ ಅಂತ ಯೋಚಿಸುತ್ತಿರಬಹುದು. ಹೌದು, ನಿಜಕ್ಕೂ ಇವನಿಗೆ ಅದನ್ನು ಎಣಿಸಲು ಆಗುವುದಿಲ್ಲ ಏಕೆಂದರೆ, ಪಾಪ ಎಣಿಸಲು ಅವನಿಗೆ ಏನೂ ಉಳಿದಿರುವುದೇ ಇಲ್ಲ! ತನ್ನ ಅಪ್ಪನಿಗಿರುವ ಒಂದಷ್ಟು ಆಸ್ತಿ–ಆ ಪುಟ್ಟ ಎಸ್ಟೇಟ್, ಕಪ್ಪು ಮಣ್ಣಿನ ಸಾವಿರ ಎಕರೆ ಹೊಲ... ಇದೆಲ್ಲಾ ಹೇಳದೇ ಕೇಳದೇ ಹೋಗಿಬಿಡಬಹುದು. ಮಗನಿಗೆ ಅದರ ಉತ್ತರಾಧಿಕಾರತ್ವ ದೊರೆಯುತ್ತೆ ಅನ್ನೋದರ ಬಗ್ಗೆ ನನಗೆ ಅನುಮಾನವಿದೆ. ತಂದೆಯ ಮೇಲೆ ಇವನಿಗಿರುವ ಮಮಕಾರ ಅಷ್ಟರಲ್ಲೇ ಇದೆ. ನಾನು ಅಂದುಕೊಂಡಿರುವ ಪ್ರಕಾರ ಇವನೊಬ್ಬ ದಿಕ್ಕಿಲ್ಲದ ದರ್ವೇಸಿಯಾಗ್ತಾನೆ...’

> ‘ನಾವಿಬ್ಬರೂ ಕಿಟಕಿಯ ಹತ್ತಿರ ಒಟ್ಟಿಗೇ ನಿಂತು, ನೀರಿನ ತಾಜಾ ಘಮಲನ್ನು ಆಸ್ವಾದಿಸುತ್ತಾ, ಮಳೆಯಿಂದ ತೋಯ್ದಿದ್ದ ರಸ್ತೆಯನ್ನು ನೋಡುತ್ತಿದ್ದೆವು.

ಇಂಥ ಕಡೆಯ ಸಂಭಾಷಣೆ ಸಂಭವಿಸಿದ್ದು ಸೇಂಟ್ ಪೀಟರ್ಸ್ ಹಬ್ಬದ ದಿನ. ನನಗದು ಎಂದೆಂದಿಗೂ ಮರೆಯಲಾಗದ ದಿನ. ಕೆಥೆಡ್ರಿಲ್ ಚರ್ಚ್‌ನ ಪ್ರಾರ್ಥನೆಯಲ್ಲಿ ಭಾಗವಹಿಸುವ ಸಲುವಾಗಿ ಹಾಗೂ ಅನಂತರ ಆ ದಿನ ಗೌವರ್ನರನ ಹುಟ್ಟು ಹಬ್ಬದ ದಿನವೂ ಆಗಿದ್ದುದರಿಂದ ಗೌವರ್ನರನೊಂದಿಗೆ ಬೆಳಗಿನ ತಿಂಡಿ ತಿನ್ನುವ ಸಲುವಾಗಿ, ಅಪ್ಪ ಆವತ್ತು ಬೆಳಗ್ಗೆ ತುಂಬಾ ಬೇಗನೇ ಮನೆ ಬಿಟ್ಟಿದ್ದ. ಹಾಗೆ ನೋಡಿದರೆ, ಭಾನುವಾರಗಳನ್ನು ಬಿಟ್ಟು ಮಿಕ್ಕ ಯಾವ ದಿನವೂ ಅಪ್ಪ ಮನೆಯಲ್ಲಿ ತಿಂಡಿ ತಿನ್ನುತ್ತಿರಲಿಲ್ಲ. ಹಾಗಾಗಿ, ಎಂದಿನಂತೆ ತಿಂಡಿಗೆ ನಾವು ಮೂವರೇ ಇದ್ದೆವು. ತಿಂಡಿಯ ಕೊನೆಗೆ ಲೀಲ್ಯಾಳಿಗೆ ಸಕ್ಕರೆ ಮಿಠಾಯಿಗಳ ಬದಲಿಗೆ ಅಡಿಗೆಯ ಗೂರಿ ಚೆರಿ ಹಣ್ಣಿನ ಪಾನಕವನ್ನು ಕೊಟ್ಟು ಬಿಟ್ಟಿದ್ದಳು. ಅಷ್ಟಕ್ಕೇ ಲೀಲ್ಯಾ ಕೂಗಿ ದೊಡ್ಡ ರಂಪ ಮಾಡಿದ್ದಲ್ಲದೆ, ಮೇಜನ್ನು ಗುದ್ದುತ್ತಾ ತಟ್ಟೆಯನ್ನು ಎತ್ತಿ ನೆಲಕ್ಕೆ ಒಗೆದು